# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ಜಾಣ ಪರೀಕ್ಷೆ – ೨೦೧೫

ಪ್ರಶ್ನೆಪತ್ರಿಕೆ – ೧

## ನಡುಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**೧. ಒಂದರ ಭಾವವನ್ನು ವಿವರಿಸಿ.** ೧೦

ಅ) ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನಾ ಸುಂಕಕ್ಕಂಜಿ
ಕಳವೆಯೆಲ್ಲ ಹೋಗಿ ಬರಿಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ

ಆ) ಸದ್ಯಕಿರು ಹುಲಗುರು ಸಂತಿ
ಗದ್ದಲದೊಳಗ ಯಾತಕ ನಿಂತಿ
ಬಿದ್ದು ಒದ್ದಾಡಿದರ ಎಬ್ಬಿಸುವರ್‍ಯಾರಿಲ್ಲ
ಬುದ್ದಿಗೇಡಿ ಮುದುಕಿ ನೀನು !
ಬಿದ್ದಿಯಬೇ ಮುದುಕೀ

**೨. ಕೆಳಗಿನ ನಾಲ್ಕು ವಾಕ್ಯಗಳನ್ನು ಸಂದರ್ಭೋಚಿತವಾಗಿ ವಿವರಿಸಿ.** ೨೦

ಅ) ನಿಮಗಾಗಿ ಸತ್ತವರಾರನೂ ಕಾಣೆ
ಆ) ಶಿವನ ಚಿಂತೆಯಲಿದ್ದರೊಬ್ಬರನು ಕಾಣೆ
ಇ) ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ?
ಈ) ಜಲವಿಲ್ಲ ಬೆಳೆ ಬೆಳೆದಾಡಿದೆ
ಉ) ಸಾವಿರ ವರಹ ಕೊಟ್ಟರೂ ಸಿಗಲಾರದ ಸತಿ ನೀನು
ಊ) ಆಚಾರಕರಸಾಗು ನೀತಿಗೆ ಪ್ರಭುವಾಗು

(ಪು.ತಿ.ನೋ.)



**೩. ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

೧) ಆಯ್ದಕ್ಕಿ ಲಕ್ಕಮ್ಮ ೨) ಕೀರ್ತನೆ ೩) ಗುರು
೪) ಸರ್ಪಭೂಷಣ ಶಿವಯೋಗಿ ೫) ತ್ರಿಪದಿ ೬) ಸರ್ವಜ್ಞ

**೪. ಕೆಳಗಿನವುಗಳಲ್ಲಿ ಐದು ಪದಗಳಿಗೆ ಅರ್ಥ ಬರೆಯಿರಿ.** ೦೫

೧) ಭಸ್ಮ ೨) ನಖ ೩) ಕುಟಿಲ ೪) ಚರಣ
೫) ವಸುಧೆ ೬) ಹಚ್ಚಡ ೭) ಸಟ್ಟುಗ ೮) ತಿಟ್ಟು
೯) ಸೊರಣೆ ೧೦) ಒಡಲು

**೫. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ.** ೩೦

ಅ) ಕೋಪ ಮತ್ತು ಡಾಂಭಿಕ ಭಕ್ತಿಯನ್ನು ತಮ್ಮ ವಚನಗಳಲ್ಲಿ ಬಸವಣ್ಣನವರು ಹೇಗೆ ಅರ್ಥೈಸಿದ್ದಾರೆ? ತಿಳಿಸಿ.
ಆ) ಧರೆಯಲ್ಲಿರುವ ದುರ್ಜನರನ್ನು ಜಾಲಿಯ ಮರಕ್ಕೆ ಹೋಲಿಸಲು ಕಾರಣವೇನು?
ಇ) 'ಶರೀರವೆಂಬ ಹೊಲವನ್ನು ಹಸನು ಮಾಡಿ' ಏನು ಮಾಡಬೇಕೆಂದು ಶಿವಯೋಗಿಗಳು ಹೇಳುತ್ತಿದ್ದಾರೆ.
ಈ) ಜಾತಿ ಕುಲವನ್ನು ಕುರಿತಂತೆ ಸರ್ವಜ್ಞನ ಅಭಿಪ್ರಾಯವೇನು?
ಉ) ತಾಯಿಯ ಬಗೆಗಿನ ಪ್ರೀತಿ ಎಂಥದು? ತ್ರಿಪದಿಗಳ ಆಧಾರದಿಂದ ಉತ್ತರಿಸಿ.

**೬. ಒಂದು ಪ್ರಶ್ನೆಗೆ ವಿಮರ್ಶಾತ್ಮಕವಾಗಿ ಉತ್ತರಿಸಿ.** ೧೫

ಅ) ಅಕ್ಕಮಹಾದೇವಿಯ ಯಾವುದಾದರೂ ಮೂರು ವಚನಗಳನ್ನು ವಿಮರ್ಶಾತ್ಮಕವಾಗಿ ವಿವರಿಸಿ.
ಆ) ಕುಲದ ಬಗ್ಗೆ ಕನಕದಾಸರ ಅಭಿಪ್ರಾಯಗಳೇನು? ಚರ್ಚಿಸಿ.
ಇ) ಹೆಣ್ಣಿನ ಸಂಕಟ ಮತ್ತು ತಳಮಳಗಳು ತ್ರಿಪದಿಗಳಲ್ಲಿ ಹೇಗೆ ವ್ಯಕ್ತವಾಗಿವೆ? ವಿವರಿಸಿ.

***

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ಜಾಣ ಪರೀಕ್ಷೆ – ೨೦೧೫

**ಪ್ರಶ್ನೆಪತ್ರಿಕೆ – ೨**

## ನಾಟಕ ಮತ್ತು ಪ್ರಬಂಧ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ನಾಟಕ

**೧. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ.** ೩೦

ಅ. ಸೀತಾ ಸ್ವಯಂವರ ನಾಟಕದ ೧ನೇ ಅಂಕದಲ್ಲಿನ ಶುಕ–ಸಾರಣರ ಮಾತುಗಳಲ್ಲಿನ ಸ್ವಾರಸ್ಯವನ್ನು ವಿವರಿಸಿ.

ಆ. ಸೀತಾಸ್ವಯಂವರಕ್ಕೆ ಒದಗಿದ ವಿಘ್ನಗಳೇನು? ಅವುಗಳು ನಿವಾರಣೆಯಾದ ಬಗೆಯನ್ನು ವಿವರಿಸಿ.

ಇ. ಜನಕರಾಯನು ರಾಮ–ಸೀತೆಯರ ಮದುವೆಯನ್ನು ರಹಸ್ಯವಾಗಿ ಮಾಡುವುದರ ಉದ್ದೇಶವೇನು?

ಈ. ರಾಮ–ಸೀತೆಯರನ್ನು ವಂಚಿಸಲೆಂದು ಬಂದ ವಿರಾಧ–ಶೂರ್ಪನಖಿಯರು ವಂಚಿತವಾದ ಬಗೆಯನ್ನು ವಿವರಿಸಿ.

ಉ. ಸೀತಾ ಸ್ವಯಂವರದ ಭೋಜನಾ ನಂತರದಲ್ಲಿ ಬ್ರಾಹ್ಮಣರ ನಡುವೆ ನಡೆದ ಮಾತಿನ ಸ್ವಾರಸ್ಯವನ್ನು ಬಣ್ಣಿಸಿ.

**೨. ಯಾವುದಾದರೂ ಮೂರನ್ನು ಸಂದರ್ಭದೊಡನೆ ವಿವರಿಸಿ.** ೧೫

ಅ. ನಾವು ಅವರೆದುರಿಗೆ ಇದ್ದರೂ ಅವರಿಗೆ ಕಾಣಿಸುವುದಿಲ್ಲ.

ಆ. ನಾನು ಬಲತ್ಕಾರವನ್ನು ಯೋಚಿಸಿದೆ. ನೀನು ವಂಚನೆಯನ್ನು ಯೋಚಿಸಿರುವೆ.

ಇ. ಇವನು ಕರಾಳನಲ್ಲ ನಿಜವಾದ ಪಿಂಗಳನು. ನಾನು ಮೋಸ ಹೋದೆನು.

ಈ. ಅಮ್ಮಾ! ನಾನು ರಾಕ್ಷಸನಲ್ಲ. ರಾಮಭದ್ರನ ಪ್ರಿಯಸಖನು.

ಉ. ಇನ್ನೂ ಈ ಆಯುಧ ಪಿಶಾಚವನ್ನು ಬಿಟ್ಟಿಲ್ಲವೆ?

(ಪು.ತಿ.ನೋ.)



**೩. ಯಾವುದಾದರೂ ಒಂದನ್ನು ಕುರಿತು ಟಿಪ್ಪಣಿ ಬರೆಯಿರಿ.** ೫

ಅ) ಅಹಲ್ಯೆ ಆ) ತಿರಸ್ಕರಣೀ ವಿದ್ಯೆ ಇ) ಸಾರಣ

### ಪ್ರಬಂಧ

**೪ ಇವುಗಳಲ್ಲಿ ಮೂರಕ್ಕೆ ಟಿಪ್ಪಣಿ ಬರೆಯಿರಿ.** ೧೫

ಅ) ದೆವ್ವಗಳು ಆ) ಕುವೆಂಪು ಇ) ಎಚ್. ನಾಗವೇಣಿ

ಈ) ತುಳುನಾಡಿನ ಹಬ್ಬಗಳು ಉ) ಬೂದುಗುಂಬಳಕಾಯಿ

**೫. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

ಅ. ಸೆಮಿನಾರುಗಳನ್ನು ಕುರಿತು ಲೇಖಕರು ಲೇವಡಿ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ.

ಆ. ಪ್ಯಾರನೊಂದಿಗೆ ನಿರೂಪಕರೂ ಪೇಚಿಗೆ ಸಿಲುಕಿದ ಸಂದರ್ಭವನ್ನು ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿ.

ಇ. ಹೆಸರಿನಲ್ಲಿರುವ ಸೊಗಸನ್ನು ಹಂಪನಾ ಹೇಗೆ ವರ್ಣಿಸಿದ್ದಾರೆ?

**೬. ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ.** ೧೫

ಅ. ಗ್ರಹಣ ಕಾಲದಲ್ಲಿ ಟಿ.ವಿ. ನೋಡುವುದು ಅಪಾಯ – ಪ್ರಬಂಧದ ಆಶಯವೇನು?

ಆ. ಪುಟ್ಟಾಚಾರಿ ಹಾಗೂ ಹೆಬ್ಬುಲಿಯ ಮುಖಾಮುಖಿಯ ಸಂದರ್ಭದ ಸ್ವಾರಸ್ವವೇನು?

***

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಜಾಣ ಪರೀಕ್ಷೆ – ೨೦೧೫

**ಪ್ರಶ್ನೆಪತ್ರಿಕೆ – ೩**

## ಕನ್ನಡ ಸಾಹಿತ್ಯ ಚರಿತ್ರೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

೧. ಪಂಪ ಪೂರ್ವಯುಗದ ಕನ್ನಡ ಸಾಹಿತ್ಯಕ್ಕೆ ಶಾಸನ ಮತ್ತು ಕಾವ್ಯಗಳು ನೀಡಿದ ಕೊಡುಗೆಯೇನು? ವಿವರಿಸಿ. ೧೫

ಅಥವಾ

ಪಂಪಯುಗದ ಜೈನಕವಿಗಳ ಸಾಹಿತ್ಯ ಸೇವೆಯನ್ನು ವಿವರಿಸಿ.

೨. ರಗಳೆ ಕವಿ ಹರಿಹರ ಮತ್ತು ಷಟ್ಪದಿಬ್ರಹ್ಮ ರಾಘವಾಂಕರ ಸಾಹಿತ್ಯಕ ಕೊಡುಗೆಗಳೇನು? ವಿವರಿಸಿ. ೧೫

ಅಥವಾ

'ಕನ್ನಡ ಸಾಹಿತ್ಯದ ಮೆರಗು ವಚನ ಸಾಹಿತ್ಯದಲ್ಲಿದೆ' ಶರಣರ ವಚನಗಳ ಹಿನ್ನೆಲೆಯಲ್ಲಿ ವಿಚಾರ ಮಾಡಿ.

೩. ಕನ್ನಡ ಭಕ್ತಿ ಸಾಹಿತ್ಯಕ್ಕೆ ದಾಸ ಸಾಹಿತ್ಯದ ಕೊಡುಗೆಯನ್ನು ವಿವರಿಸಿ. ೧೫

ಅಥವಾ

ರಾಮಾಯಣ, ಮಹಾಭಾರತ ಕಥೆಗೆ ಕುಮಾರ ವಾಲ್ಮೀಕಿ ಹಾಗೂ ಕುಮಾರವ್ಯಾಸರು ನೀಡಿದ ಕೊಡುಗೆಯೇನು? ವಿವರಿಸಿ.

೪. ಮೈಸೂರು ಒಡೆಯರ ಕಾಲದ ಸಾಹಿತ್ಯ ಬೆಳವಣಿಗೆಯನ್ನು ಪರಿಶೀಲಿಸಿ. ೧೫

ಅಥವಾ

೧೨ನೇ ಶತಮಾನ ಅಥವಾ ನಂತರದ ವೀರಶೈವ ಸಾಹಿತ್ಯವನ್ನು ಸಮೀಕ್ಷೆ ಮಾಡಿ.

(ಪು.ತಿ.ನೋ.)



೫. 'ಹೊಸಗನ್ನಡದ ಮುಂಗೋಳಿ ಮುದ್ದಣ'ನನ್ನು ಒಳಗೊಂಡಂತೆ ಆಧುನಿಕ ಸಾಹಿತ್ಯವನ್ನು ಪರಿಚಯಿಸಿ. ೧೫

ಅಥವಾ

ಕನ್ನಡ ಸಾಹಿತ್ಯಕ್ಕೆ ಆಧುನಿಕ ನಾಟಕ ಸಾಹಿತ್ಯದ ಕೊಡುಗೆಗಳೇನು? ವಿವರಿಸಿ.

೬. **ಇವುಗಳಲ್ಲಿ ಐದಕ್ಕೆ ಟಿಪ್ಪಣಿ ಬರೆಯಿರಿ.** ೨೫

೧. ಚಾವುಂಡರಾಯ ೨. ದೇವರದಾಸಿಮಯ್ಯ ೩. ಅಲ್ಲಮಪ್ರಭು
೪. ಆಂಡಯ್ಯ ೫. ಜನ್ನ ೬. ಭರತೇಶ ವೈಭವ
೭. ಸಂಚಿಯ ಹೊನ್ನಮ್ಮ ೮. ಬಿ.ಎಂ.ಶ್ರೀಕಂಠಯ್ಯ ೯. ಕುವೆಂಪು
೧೦. ಕನ್ನಡದಲ್ಲಿ ವಿಮರ್ಶೆ

***

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ಜಾಣ ಪರೀಕ್ಷೆ – ೨೦೧೫

**ಪ್ರಶ್ನೆಪತ್ರಿಕೆ – ೪**

## ಹೊಸಗನ್ನಡ ವ್ಯಾಕರಣ ಮತ್ತು ಛಂದಸ್ಸು

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ಭಾಗ – ೧

### ಹೊಸಗನ್ನಡ ವ್ಯಾಕರಣ

**I. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೨೦

೧. ಕನ್ನಡ ವರ್ಣಮಾಲೆಯನ್ನು ವರ್ಗೀಕರಿಸಿ, ವಿವರಿಸಿ.

೨. ವ್ಯಂಜನ ಸಂಧಿಗಳನ್ನು ಉದಾಹರಣೆಗಳೊಂದಿಗೆ ಪರಿಚಯಿಸಿ.

೩. ಯಾವುದಾದರೂ ಮೂರು ಸಮಾಸಗಳನ್ನು ಉದಾಹರಣೆ ಸಹಿತ ತಿಳಿಸಿ.

೪. ಬರವಣಿಗೆಯಲ್ಲಿ ಬರುವ ಲೇಖನ ಚಿಹ್ನೆಗಳನ್ನು ತಿಳಿಸಿಕೊಡಿ.

೫. ವಾಕ್ಯರಚನೆಯಲ್ಲಿ ಎಷ್ಟು ವಿಧಗಳಿವೆ? ಯಾವುವು? ಉದಾಹರಣೆ ಸಹಿತ ವಿವರಿಸಿ.

**II.೬. ಯಾವುದಾದರೂ ನಾಲ್ಕಕ್ಕೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.** ೪

| | | | |
|---|---|---|---|
| ರಕ್ತ | ಋಷಿ | ರತ್ನ | ಬ್ರಹ್ಮ |
| ಆಗಸ | ಚಂದಿರ | ರಕ್ಕಸ | ಸಾವಿರ |

**೭. ಮೂರನ್ನು ಬಿಡಿಸಿ ಬರೆದು ಸಂಧಿ/ಸಮಾಸದ ಹೆಸರನ್ನು ತಿಳಿಸಿ.** ೬

| | |
|---|---|
| ಇಮ್ಮಡಿ | ಶಿರಬಾಗು |
| ಕೈಕಾಲು | ಮರಗಿಡಬಳ್ಳಿ |

**೮. ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

| | |
|---|---|
| ಸ್ವರಗಳು | ವಚನ |
| ಅಧ್ಯಾಹಾರ | ಗಮಕಸಮಾಸ |
| ಸವರ್ಣದೀರ್ಘಸಂಧಿ | ಅವ್ಯಯಗಳು |

(ಪು.ತಿ.ನೋ.)



### ಭಾಗ – ೨

### ಛಂದಸ್ಸು

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

೯. ಗಣ ಎಂದರೇನು? ಗಣಗಳಲ್ಲಿ ಎಷ್ಟು ವಿಧ? ಯಾವುವು? ವಿವರಿಸಿ.

೧೦. ಖ್ಯಾತ ಕರ್ಣಾಟಕಗಳು ಯಾವುವು? ಉದಾಹರಣೆಯೊಂದಿಗೆ ಪರಿಚಯಿಸಿ.

೧೧. ಷಟ್ಪದಿಗಳು ಎಷ್ಟು? ಯಾವುವು? ಯಾವುದಾದರೊಂದನ್ನು ಉದಾಹರಣೆಯೊಂದಿಗೆ ತಿಳಿಸಿ.

೧೨. ಸಾಂಗತ್ಯ ಛಂದಸ್ಸನ್ನು ಲಕ್ಷಣಗಳೊಂದಿಗೆ ನಿರೂಪಿಸಿ.

**IV. ಅ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

| | |
|---|---|
| ೧೩. ಮುಡಿ | ೧೪. ಮಹಾಛಂದಸ್ಸು |
| ೧೫. ಸಾನೆಟ್ | ೧೬. ಪ್ರಾಸ |
| ೧೭. ಯತಿ | ೧೮. ತ್ರಿಪದಿ |

**ಆ. ಒಂದು ಪದ್ಯಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ.** ೧೦

೧೯. ಆ ರವಮಂ ನಿರ್ಜಿತ ಕಂ
ಠೀರವರವಮಂ ನಿರಸ್ತಘನರವಮಂ ಕೋ
ಪಾರುಣ ನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗ ಪತಾಕಂ

೨೦. ಹುತ್ತಿನಿಂ ಫಣಿವೆರಸಿ ಕೆಡೆಯೆ ಕಂಡೊಡನಿರ್ದ
ತತ್ತುಕಂಗಳು ಹೆದರಿ ಬಿಟ್ಟೋಡಿ ಹೋದರೂ
ರತ್ತಲಿತ್ತಂ ತಾಯ್ಗೆ ಹಲುಬಿ ತಂದೆಯಂ ಕರೆದು ದೆಸೆದೆಸೆಗೆ ಬಾಯಬಿಟ್ಟು
ನೆತ್ತಿಗೇರಿದ ವಿಷದ ಕೈಯಿಂದ ಮಡಿದನೀ
ಪೊತ್ತೆನ್ನ ಕುಲದ ಕುಡಿ ಮುರುಟಿತೆಂದಮ್ಮಳಂ
ಬೆತ್ತು ಬೀಳದೆ ಮಾಣೆನೆಂಬಂತೆ ರವಿಬಿದ್ದನಂದು ಪಡುವಣ ಕಡಲೊಳು॥

***